


## ಚಕ್ ಚಕಾಚಕ್!



**ಅ**ಮೆರಿಕಾದ ಸಮರಕಲಾ ತಜ್ಞ ಹಾಗೂ ಹಾಲಿವುಡ್ ಸಿನಿಮಾಗಳ ಸೂಪರ್‌ಸ್ಟಾರ್ ಚಕ್ ನೋರ್ರಿಸ್‌ನ ಅಭಿಮಾನಿಗಳು ಒಂದು ವೆಬ್‌ಸೈಟ್ ಆರಂಭಿಸಿದ್ದಾರೆ. ಚಕ್ ನೋರ್ರಿಸ್ ಫ್ಯಾಕ್ಟ್ಸ್ ಡಾಟ್ ಕಾಮ್ ಎಂಬ ಈ ಸೈಟ್ ಅತ್ಯಂತ ಜನಪ್ರಿಯ. ಚಕ್‌ನನ್ನು ಒಬ್ಬ ಅತಿಮಾನುಷ ಸಾಹಸಿಯನ್ನಾಗಿ ಬಿಂಬಿಸಿ, ಅವನು ನಡೆಸುವ ಕಾಲ್ಪನಿಕ ಹಾಸ್ಯಮಯ ಲೀಲೆಗಳನ್ನು ಈ ವೆಬ್‌ಸೈಟ್‌ನಲ್ಲಿ ಪಟ್ಟಿ ಮಾಡಲಾಗಿದೆ.

ಚಕ್ ನೋರ್ರಿಸ್‌ನ ಸಾವಿರಾರು 'ಲೀಲೆ'ಗಳಲ್ಲಿ ಕೆಲವು ಬೆಸ್ಟ್ ಸ್ಯಾಂಪಲ್‌ಗಳು ಇಲ್ಲಿವೆ, ಓದಿ.

★ ಚಕ್‌ನ ಕಂಪ್ಯೂಟರ್‌ನಲ್ಲಿ 'ಕಂಟ್ರೋಲ್' ಬಟನ್ ಇಲ್ಲವೇ ಇಲ್ಲ; ಯಾಕೆಂದರೆ ಕಂಟ್ರೋಲ್ ಇರುವುದು ಚಕ್‌ನ ಬಳಿ ಮಾತ್ರ.

★ ಚಕ್ ಕಣ್ಣು ತೆರೆದಿರುವಂತೆಯೇ ಸೀನು ತೆಗೆಯಬಲ್ಲ.

★ ಚಕ್ ಎರಡು ಕಲ್ಲುಗಳಿಂದ ಒಂದು ಹಕ್ಕಿಯನ್ನು ಕೊಲ್ಲ ಬಲ್ಲ.

★ ದೆವ್ವಗಳು ಕೂಡಾ ಚಕ್ ಹತ್ತಿರದಲ್ಲೆಲ್ಲೂ ಇಲ್ಲ ಎಂದು ಖಚಿತವಾದ ನಂತರವೇ ಮಲಗುತ್ತವೆ.

★ ಚಕ್ ಪುಸ್ತಕಗಳನ್ನು ಪುಟತೆರೆದು ಓದುವುದಿಲ್ಲ. ಚಕ್‌ನ ದಿಟ್ಟಿಸುವಿಕೆಗೆ ಹೆದರಿ ಪುಸ್ತಕವೇ ಅವನಿಗೆ ಬೇಕಾದ ಮಾತಿ ಕೊಟ್ಟುಬಿಡುತ್ತದೆ.

★ ಚಕ್ ಅಗಣಿತ (ಇನ್‌ಫಿನಿಟಿ)ವರೆಗೆ ಅಂಕಿಗಳನ್ನು ಹೇಳಿದ್ದಾನೆ, ಅದೂ ಎರಡು ಸಲ!

★ ಚಕ್ ಪುಶ್ ಅಪ್ ವ್ಯಾಯಾಮ ಮಾಡಬೇಕಾದರೆ ತಾನು ಮೇಲೆ ಬರುವವನಲ್ಲ, ಬದಲಾಗಿ ಭೂಮಿಯನ್ನೇ ಕೆಳಗೆ ತಳ್ಳುತ್ತಾನೆ.

★ ಚಕ್ ಕುದುರೆಯನ್ನು ನೀರಿನವರೆಗೆ ಕರೆದುಕೊಂಡುಹೋಗಿ ಅದಕ್ಕೆ ನೀರು ಕುಡಿಸಬಲ್ಲ.

★ ಚಕ್ ಗಂಟೆ ನೋಡುವುದಿಲ್ಲ, ಬದಲಾಗಿ ಗಂಟೆ ಎಷ್ಟಾಗಿರಬೇಕೆಂದು ನಿರ್ಧರಿಸುತ್ತಾನೆ.

★ ಚಕ್ ಮಲಗಿರಬೇಕಾದರೆ ಸುತ್ತಲೂ ಬೆಳಕಿರುತ್ತದೆ. ಯಾಕೆಂದರೆ ಕತ್ತಲು ಕೂಡಾ ಅವನ ಬಳಿ ಸುಳಿಯಲು ಹೆದರುತ್ತದೆ.

★ ಡಾರ್ವಿನ್ನನ ಇವೊಲ್ಯುಷನ್ ಸಿದ್ಧಾಂತ ಬರೀ ಸುಳ್ಳು, ಕೇವಲ ಚಕ್ ಬದುಕಲು ಬಿಟ್ಟಿರುವ ಜೀವಿಗಳು ಮಾತ್ರ ಭೂಮಿಯಲ್ಲಿವೆ.

★ ಚಕ್‌ನ ಒದೆತವನ್ನು ಹದಿನಾರು ರಾಜ್ಯಗಳಲ್ಲಿ ಮರಣದಂಡನೆ ವಿಧಿಸಲು ಉಪಯೋಗಿಸಲಾಗುತ್ತಿದೆ.

★ ವಿಜ್ಞಾನಿಗಳ ಲೆಕ್ಕಾಚಾರದ ಪ್ರಕಾರ ಬ್ರಹ್ಮಾಂಡದ ಉಗಮವಾದ ಸಮಯದಲ್ಲಿ ಉಂಟಾದ ಮಹಾ ಸ್ಫೋಟದ ಶಕ್ತಿ ಸರಿಸುಮಾರು ಚಕ್‌ನ ಒದೆತದಷ್ಟಿತ್ತು.

★ ಭಯಾನಕವಾದ 'ವೆಪನ್ ಆಫ್ ಮಾಸ್ ಡಿಸ್ಟ್ರಕ್ಷನ್' ಆಯುಧ ಇರಾಕ್‌ನಲ್ಲಿ ಇಲ್ಲ, ಚಕ್‌ನ ಮನೆ ಇರುವುದು ಓಕ್ಲ ಹೋಮದಲ್ಲಿ.

★ ಸಾವಿರಾರು ವರ್ಷಗಳ ಹಿಂದೆ ಚಕ್ ಮತ್ತು ಒಂದು ಕರಡಿ ಮುಖಾಮುಖಿಯಾದರು. ಚಕ್‌ನನ್ನು ಕಂಡು ಹೆದರಿದ ಆ ಕರಡಿ ಉತ್ತರ ಧ್ರುವಕ್ಕೆ ಓಡಿ ಹೋಯಿತು! ಆಗ ಆದ ಹೆದರಿಕೆಯ ಪ್ರಭಾವದಿಂದ ಅದರ ಕೂದಲೆಲ್ಲ ಬಿಳಿಯಾಯಿತು. ಅದೇ ಆನಂತರ ಹಿಮಕರಡಿ ಎಂದು ಕರೆಯಲ್ಪಟ್ಟಿತು.

★ ಚಕ್ ನೋರ್ರಿಸ್ ಒಂದು ಸಲ ಕುದುರೆಯ ಗಲ್ಲಕ್ಕೆ ಒದ್ದ. ಆ ಕುದುರೆಯ ಸಂತಾನವೇ ಇಂದಿನ ಜಿರಾಫೆಗಳು.

★ ಚಕ್‌ನನ್ನು ಕ್ಲೋನಿಂಗ್ ಮಾಡುವುದಕ್ಕೆ ನಿಷೇಧ ಹೇರಲಾಗಿದೆ. ಯಾಕೆಂದರೆ ಇಬ್ಬರು ಚಕ್‌ಗಳ ಕರಾಟೆ ಒದೆತಗಳು ಒಂದಕ್ಕೊಂದು ತಾಗಿದರೆ ಬ್ರಹ್ಮಾಂಡದ ಅಂತ್ಯ ಆಗುವ ಸಾಧ್ಯತೆ ಇದೆ ಎಂಬುದು ವಿಜ್ಞಾನಿಗಳ ಅಭಿಪ್ರಾಯ.

★ ಪೆಟ್ರೋಲಿನ ಬೆಲೆ ಹೆಚ್ಚಾಗುತ್ತಿರುವುದರಿಂದ ಚಕ್ ತನ್ನ ಕುಡಿತದ ಅಭ್ಯಾಸವನ್ನು ನಿಲ್ಲಿಸಲು ಆಲೋಚಿಸುತ್ತಿದ್ದಾನೆ.

★ ಚಕ್ ಡೆಂಟಿಸ್ಟ್ ಹತ್ತಿರ ಹೋಗಲ್ಲ, ಯಾಕೆಂದರೆ ಅವನ ಹಲ್ಲುಗಳು ಅತಿಗಟ್ಟಿ. ಚಕ್‌ನ ಶತ್ರುಗಳೂ ಹೋಗಲ್ಲ– ಯಾಕೆಂದರೆ ಅವರಿಗೆ ಹಲ್ಲುಗಳೇ ಇರಲ್ಲ.

ಹೇಗಿವೆ ಚಕ್‌ನ ಲೀಲೆಗಳು?!

■ ಎಮ್.ಕೆ